**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.ರವರ ನ್ಯಾಯಾಲಯ, ಚಾಮರಾಜನಗರ.**

**ಸಿ.ಸಿ. ನಂ. 782/2026**

ಫಿರ್ಯಾದಿ : ರಾಜ್ಯದ ಪರವಾಗಿ ಸಂಚಾರಿ ಪೊಲೀಸ್ ಠಾಣೆ, ಚಾಮರಾಜನಗರ

**ವಿರುದ್ಧ**

ಆರೋಪಿ : ಕು. ಮೇಘಾ ಬಿನ್ ಬಸವರಾಜು,
22 ವರ್ಷ, ವಾಸಃ ಕುಣಗಳ್ಳಿ ಗ್ರಾಮ,
ಕೊಳ್ಳೇಗಾಲ ತಾಲ್ಲೂಕು.

**ಇವರ ವಿರುದ್ಧ ಮಾಡುವ ಆರೋಪಣೆ ಏನೆಂದರೆ**

ದಿಃ 03.04.2026 ರಂದು ಸಂಃ 7.30 ಗಂಟೆ ಸಮಯದಲ್ಲಿ ಚಾಮರಾಜನಗರ ಸಂಚಾರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಾಮರಾಜನಗರ ಪಟ್ಟಣದ ನಗರಸಭೆ ಸರ್ಕಲ್ ಬಳಿ ಸಾಕ್ಷಿ-1ರವರು ಸಾಕ್ಷಿ-2 ಮತ್ತು 3ರವರೊಂದಿಗೆ ನಿಗಧಿತ ಸಮವಸ್ತ್ರದಲ್ಲಿದ್ದು ವಾಹನ ತಪಾಸಣೆ ಮಾಡುತ್ತಿದ್ದಾಗ ಆರೋಪಿಯಾದ ನೀವು ಮದ್ಯಪಾನ ಮಾಡಿ ಕೆಎ-10-ಇಜೆ-8082ರ ನೊಂದಣಿ ಸಂಖ್ಯೆಯ ಬೈಕನ್ನು ಹೆಲ್ಮೆಟ್ ಧರಿಸದೇ, ಡಿ.ಎಲ್ ಇಲ್ಲದೇ, ವಾಹನದ ದಾಖಲೆಗಳನ್ನು ಹಾಜರುಪಡಿಸದೇ ಹಾಗೂ ಪೊಲೀಸರೊಂದಿಗೆ ಅಸಭ್ಯರೀತಿಯಲ್ಲಿ ವರ್ತಿಸಿದ್ದು, ಆ ಮೂಲಕ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ. 129 ರೆ/ವಿ 177, 181 ರೆ/ವಿ 3(1),179 ಹಾಗೂ 130(1)ರೆ/ವಿ 177 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

**ಪ್ರಶ್ನೆಃ 1.** ಆರೋಪಣೆ ಓದಿ ಹೇಳಿದುದು ಅರ್ಥವಾಯಿತ?

**ಉತ್ತರಃ** ಅರ್ಥವಾಯಿತು.

**ಪ್ರಶ್ನೆಃ 2.** ಶಿಕ್ಷೆಗೆ ಒಪ್ಪುತ್ತೀರೋ ಅಥವಾ ನಿಮ್ಮದೇನಾದರೂ ವಿಚಾರಣೆಯಾಗಬೇಕಾ?

**ಉತ್ತರಃ** ತಪ್ಪನ್ನು ಒಪ್ಪಿಕೊಳ್ಳುತ್ತೇನೆ.

ಈ ಮೇಲಿನ ಆರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನಾನು ನನ್ನ ಸ್ವಂತ ಬರಹದಲ್ಲಿ ದಾಖಲು ಮಾಡಿರುತ್ತೇನೆಂದು ಈ ಮೂಲಕ ದೃಡಿಕರಿಸುತ್ತೇನೆ.

ದಿನಾಂಕಃ 05.06.2026.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ.,ಚಾಮರಾಜನಗರ.